**ದಿನಾಂಕಃ** 27.06.2023
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪ್ರಾ.ಸಾಃ** 1

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಎಸ್., ವಕೀಲರಿಂದಃ**

2. ದಾವೆಯನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಪ್ರತಿವಾದಿಗಳು ಏನು ತಕರಾರು ಹಾಕಿದ್ದಾರೆಂದು ಎಂದು ತಿಳಿದುಕೊಂಡಿದ್ದೀರಾ ಅಂದರೆ ನಾನು ತಿಳಿದುಕೊಂಡಿಲ್ಲ.

3. ದೊಡ್ಡಲಿಂಗೇಗೌಡ ಮತ್ತು ಚೆನ್ನಮ್ಮರವರಿಗೆ ಒಟ್ಟು ಐದು ಜನ ಮಕ್ಕಳು ಅಂದರೆ ಸರಿ. ಐದು ಜನ ಮಕ್ಕಳಲ್ಲಿ ತೋಟದಲಿಂಗೇಗೌಡ, ಹೊನ್ನಮ್ಮ, ಲಿಂಗಪ್ಪ, ರಾಜಣ್ಣ, ಚೆನ್ನಮ್ಮ, ಶಿವಲಿಂಗಯ್ಯ ಅಂದರೆ ಸರಿ.

4. 1ನೇ ಪ್ರತಿವಾದಿ - ಸುಶೀಲಮ್ಮ ಎಂ.ಎನ್.ರಾಜಣ್ಣರವರಿಗೆ 2ನೇ ಹೆಂಡತಿ ಅಂದರೆ ಸರಿ. 2 ಮತ್ತು 3ನೇ ಪ್ರತಿವಾದಿಯು 1ನೇ ಪ್ರತಿವಾದಿಯ ಮಕ್ಕಳು ಅಂದರೆ ಸರಿ.

5. ಎಂ.ಎನ್.ರಾಜಣ್ಣರವರಿಗೆ ಯಶೋದಮ್ಮ ಮೊದಲನೇ ಪತ್ನಿ ಅಂದರೆ ಸರಿ. ಸದರಿ ಅವರಿಗೆ ಮಂಜಪ್ಪ ಮತ್ತು ಮೋಹನ ಹಾಗೂ ಸೌಮ್ಯ ಎನ್ನುವ ಮೂರು ಜನ ಮಕ್ಕಳು ಅಂದರೆ ಸರಿ. ದಾವಾ ಹೂಡುವಾಗ ನಾನು ಸದರಿ ಮಂಜಪ್ಪ, ಮೋಹನ ಹಾಗೂ ಸೌಮ್ಯರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ.

6. ಕಾಡಸಿದ್ದೇಗೌಡ ನನ್ನ ತಾತ. ಕಾಡಸಿದ್ದೇಗೌಡರವರು ದೊಡ್ಡಲಿಂಗೇಗೌಡರವರ ಹೆಂಡತಿ - ಚೆನ್ನಮ್ಮರವರ ಅಣ್ಣ ಅಂದರೆ ಸರ. ಕಾಡಸಿದ್ದೇಗೌಡರವರು ಚನ್ನಪಟ್ಟಣ ತಾಲ್ಲೂಲ್ಲು, ಹುಲುವಾಡಿ ಗ್ರಾಮದವರು ಅಂದರೆ ಸರಿ. ಕಾಡಸಿದ್ದೇಗೌಡರವರಿಗೆ ಹುಲುವಾಡಿ ಗ್ರಾಮದಲ್ಲಿ ಹಲವಾರು ಆಸ್ತಿ ಇತ್ತು ಅಂದರೆ ಸರಿ. ಕಾಡಸಿದ್ದೇಗೌಡರವರಿಗೆ ಗಂಡು ಸಂತಾನ ಇರಲಿಲ್ಲ ಅಂದರೆ ಸರಿ.

7. ನನ್ನ ತಂದೆ - ಎಂ.ಎನ್.ನಿಂಗಪ್ಪರವರು ಕಾಡಸಿದ್ದೇಗೌಡರವರ ಹುಲುವಾಡಿಯ ಮನೆಯಲ್ಲಿ ಇದ್ದರು ಅಂದರೆ ಸರಿಯಲ್ಲ. ನನ್ನ ತಂದೆಯ

ಜೀವತಾಧಿಯಲ್ಲಿ ಮತ ಚಲಾವಣೆಯನ್ನು ಹುಲುವಾಡಿಯಲ್ಲಿ ಚಲಾಯಿಸುತ್ತಿದ್ದರು. ನನ್ನ ತಂದೆ ಮರಣ ಹೊಂದುವವರೆಗೂ ಹುಲುವಾಡಿಯಲ್ಲಿಯೇ ಮತ ಚಲಾಯಿಸುತ್ತಿದ್ದರು ಅಂದರೆ ಸರಿ. ಅದೇ ರೀತಿ ನನ್ನ ತಾಯಿಯು ಸಹ ಹುಲುವಾಡಿಯಲ್ಲಿ ಮತ ಚಲಾಯಿಸುತ್ತಿದ್ದರು ಅಂದರೆ ಸರಿ. ನನ್ನ ತಂದೆ - ತಾಯಿಯವರ ಆಧಾರ ಕಾರ್ಡ್ ಹುಲುವಾಡಿ ಗ್ರಾಮದ ವಿಳಾಸ ನಮಾದು ಇದೆ ಅಂದರೆ ಸರಿ.

8. ಕಾಡಸಿದ್ದೇಗೌಡರವರ ಎಲ್ಲಾ ಆಸ್ತಿಗಳು ನನ್ನ ತಾಯಿಯ ಸ್ವಾಧೀನದಲ್ಲಿದೆ ಅಂದರೆ ಸಾಕ್ಷಿ ಕಾಡಸಿದ್ದೇಗೌಡರವರಿಗೆ ಇಬ್ಬರು ಹೆಣ್ಣು ಮಕ್ಕಳು, ಇಬ್ಬರ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿ ನನ್ನ ತಾಯಿಯ ಹೆಸರಿಗೆ ಖಾತೆ ಆಗುತ್ತದೆ ಅಂದರೆ ಸರಿ.

9. ತಾಃ 10.01.1976 ರಂದು ದೊಡ್ಡಲಿಂಗೇಗೌಡ ಮತ್ತು ಅವರ 4 ಜನ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆಂದು ಯಾವ ದಾಖಲೆ ಹಾಜರುಪಡಿಸಿದ್ದೀರಾ ಅಂದರೆ ಸಾಕ್ಷಿ ಪಂಚಾಯತ್ ಪಾರಿಕತ್, ಪಾಸ್‌ಬುಕ್ ಮತ್ತು ಖಾತಾ ಹಾಜರುಪಡಿಸಿರುತ್ತೇನೆ. ಪಂಚಾಯತ್ ಪಾರಿಕತ್‌ನ್ನು ನಾನು ಓದಿಸಿ ತಿಳಿದುಕೊಂಡಿದ್ದೇನೆ.

10. ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ಪಂಚಾಯತ್ ಪಾರಿಕತ್‌ನಂತೆ ನನ್ನ ತಂದೆಯ ಭಾಗಕ್ಕೆ ಸರ್ವೆ ನಂ.516 ರಲ್ಲಿ 23 ವರೆ ಗುಂಟೆ ಬಂದಿದೆ, ಉಳಿದಂತೆ ನನಗೆ ಗೊತ್ತಿಲ್ಲ.

11. ಸದರಿ ಪಂಚಾಯತ್ ಪಾರಿಕತ್‌ರಂತೆ ನಿಮ್ಮ ತಂದೆಯ ಜೊತೆಗೆ ಬೇರೆ ಯಾರಿಗೆ ಎಷ್ಟೆಷ್ಟು ವಿಭಾಗವಾಗಿದೆ ಎಂದು ತಿಳಿದುಕೊಂಡಿದ್ದೀರಾ ಅಂದರೆ ಇಲ್ಲ. ಪಂಚಾಯತ್ ಪಾರಿಕತ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಂದರ್ಭದಲ್ಲಿ ನನ್ನ ವಶದಲ್ಲಿತ್ತು, ಸದರಿ ದಾಖಲೆಯನ್ನು ನನ್ನ ತಂದೆ ಮನೆಯಲ್ಲಿಟ್ಟಿದ್ದರು.

12. ಈ ಹಂತದಲ್ಲಿ ಸಾಕ್ಷಿಗೆ ಗುರುತಿಸಿರುವ ನಿಶಾನೆಗಳನ್ನು ತೋರಿಸಿ, ಅದರಲ್ಲಿ ತಾಃ 10.01.1976 ರ ಪಂಚಾಯತ್ ಪಾರಿಕತ್‌ನ್ನು ತೋರಿಸಿ ಎಂದು ಕೇಳಲಾಗಿ, ಸಾಕ್ಷಿ ಸದರಿ ದಾಖಲೆ ಈ ನಿಶಾನೆಗಳಲ್ಲಿ ಇಲ್ಲ, ಆದರೆ ನಾನು ಹಾಜರುಪಡಿಸಿದ್ದೆನು ಎಂದು ನುಡಿಯುತ್ತಾರೆ.

13. ತಾಃ 10.01.1976 ರ ಮೂಲ ಪಂಚಾಯತ್ ಪಾರಿಕತ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೇಯಾ ಅಂದರೆ ಇಲ್ಲ. ಈ ಹಂತದಲ್ಲಿ ಸಾಕ್ಷಿಗೆ ಸರ್ವೆ ನಂ.516 ರ ಪಟ್ಟಾ ಬುಕ್ ನೀಡಿದ್ದು, ಅದನ್ನು ಸಾಕ್ಷಿ ನೋಡಿ ಅದು ಪಟ್ಟಾ ಬುಕ್ ಎಂದು ಗುರುತಿಸಿದ್ದು, ಮುಂದುವರೆದು ಸಾಕ್ಷಿ ಅದನ್ನು ಇತ್ತೀಚೆಗೆ ಮಾಡಿಸಿಕೊಂಡಿರುವುದು ಎಂದು ನುಡಿದಿದರುತ್ತಾರೆ. ಸದರಿ ದಾಖಲೆಯನ್ನು ಈಗ ನಿಡಿ.1 ಎಂದು ಗುರುತಿಸಲಾಯಿತು.

14. ಈ ಹಂತದಲ್ಲಿ ಸಾಕ್ಷಿಗೆ 2 ದಾಖಲಾತಿಗಳನ್ನು ತೋರಿಸಿದ್ದು, ಅವುಗಳು ದಾವಾ ಷಡ್ಯೂಲ್ ಸರ್ವೆ ನಂ.516 ರ ಪಹಣಿ ಮತ್ತು ಮ್ಯುಟೇಷನ್ ಆಗಿದ್ದು, ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಗಳನ್ನು ಈಗ ಕ್ರಮವಾಗಿ ನಿಡಿ.2 ಮತ್ತು 3 ಎಂದು ಗುರುತಿಸಲಾಯಿತು.

15. ನಾನು ನನ್ನ ತಂದೆಯ ಸಹಿಯನ್ನು ನೋಡಿ ಗುರುತಿಸುತ್ತೇನೆ ಅಂದರೆ ಸರಿ. ದಾವಾ ಷಡ್ಯೂಲ್ ಸರ್ವೆ ನಂ.516 ರಲ್ಲಿ ಎಂ.ಎನ್.ರಾಜಣ್ಣ ಮರಣ ಹೊಂದಿದ ನಂತರ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದಾರೆ ಅಂದರೆ ಸರಿ. ದಾವಾ ಷಡ್ಯೂಲ್ ಸರ್ವೆ ನಂ.516 ರಲ್ಲಿ ಪ್ರತಿವಾದಿಗಳಿಂದ ಸ್ವಾಧೀನಾನುಭವ ಕೊಡಿಸಿ ಎಂದು ನ್ಯಾಯಾಲಯದಲ್ಲಿ ಪರಿಹಾರ ಕೇಳಿದ್ದೀರಾ ಅಂದರೆ ಕೇಳಿದ್ದೇನೆ.

16. ನನ್ನ ತಂದೆ ಮರಣ ಹೊಂದಿದ ನಂತರ ಸರ್ವೆ ನಂ.145/7 ರಲ್ಲಿ 11 ಗುಂಟೆ, 67/5 ರಲ್ಲಿ 8 ಗುಂಟೆ, 67/3 ರಲ್ಲಿ 12 ಗುಂಟೆ, 996 ರಲ್ಲಿ ಒಂದುಕಾಲು ಗುಂಟೆ ಸೈಟ್ ನಂ.17 ಮತ್ತು 14 ನನ್ನ ತಾಯಿಯ ಹೆಸರಿಗೆ ವರ್ಗಾವಣೆ ಆಯಿತು ಅಂದರೆ ಸರಿ. ಸದರಿ ಎಲ್ಲಾ ಆಸ್ತಿಗಳು ಹುಲುವಾಡಿ ಗ್ರಾಮಗಳದ್ದು ಅಂದರೆ ಸರಿ. ಸದರಿ ಎಲ್ಲಾ ಸ್ವತ್ತುಗಳು ಮೂಲತಃ ಕಾಡಸಿದ್ದೇಗೌಡರವರಿಗೆ ಸೇರಿದ್ದು ಅಂದರೆ ಸರಿ.

17. ತಾಃ 03.09.2018 ರಲ್ಲಿ ರಘು ಎನ್ನುವವರಿಗೆ ನನ್ನ ತಾಯಿ ಸೇರಿದಂತೆ ನಾವು ವಾದಿಗಳೆಲ್ಲರೂ ನಿವೇಶನ ಸಂಖ್ಯೆ 17 ಮತ್ತು 14 ನ್ನು ಮಾರಾಟ ಮಾಡಿದ್ದೇವೆ ಅಂದರೆ ಸರಿ. ಸದರಿ ಕ್ರಯಪತ್ರವನ್ನು ಈಗ ನಿಡಿ.4 ಎಂದು ಗುರುತಿಸಲಾಯಿತು.

18. ತಾಃ 19.05.2017 ರಂದು ನನ್ನ ತಂದೆ ನೋಂದಾಯಿತ ವಿಲ್‌ಯ ಮರಣಶಾಸನ ಮೂಲಕ ಮೇಲೆ ಹೇಳಿದ ಎಲ್ಲಾ ಸ್ವತ್ತುಗಳನ್ನು ನನ್ನ ತಾಯಿ ಒಳಗೊಂಡಂತೆ ನಮ್ಮ ಹೆಸರಿಗೆ ಮಾಡಿದ್ದರು ಅಂದರೆ ಸರಿ. ಸದರಿ ವಿಲ್‌ನ್ನು ಈಗ ನಿಡಿ.5 ಎಂದು ಗುರುತಿಸಲಾಯಿತು.

19. ಸದರಿ ನಿಡಿ.4 ಮತ್ತು 5 ವಿಚಾರಗಳನ್ನು ನನ್ನ ದಾವೆಯಲ್ಲಿ ನಮೂದು ಮಾಡಿಲ್ಲ ಅಂದರೆ ಸರಿ. ದಾವಾ ಷಡ್ಯೂಲ್ ಸ್ವತ್ತನ್ನು ನನ್ನ ತಂದೆಗೆ ಹೇಗೆ ಬಂತು ಎಂದು ತೋರಿಸಲು ಪಂಚಾಯತ್ ಪಾರಿಕತ್ ತಾಃ 10.01.1976 ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇಲ್ಲ ಅಂದರೆ ಸಾಕ್ಷಿ 1999-2000 ರ ಪಹಣಿ ಪತ್ರಿಕೆಗಳು ಇವೆ, ಬೇರೆ ಯಾವುದೇ ದಾಖಲಾತಿ ಇಲ್ಲ ಎಂದು ನುಡಿಯುತ್ತಾರೆ.

20. ತಾಃ 10.01.1976 ರಿಂದ 1999-2000 ರವರೆಗೆ ದಾವಾ ಷಡ್ಯೂಲ್ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿತ್ತು ಎಂದು ಹೇಳಲು ಕಂದಾಯ ದಾಖಲೆಗಳು ಇವೆ. 1976 ರಿಂದ 1999-2000 ರವರೆಗಿನ ಮ್ಯುಟೇಷನ್ ಮತ್ತು ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

**(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ಎನ್.ಉಷಾರಾಣಿ )
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ,**
**ಚನ್ನಪಟ್ಟಣ.**